

# ಸೆನ್ಸಾರ್! ಬೇಕಾ ಸಾರ್!

'ಉಹೂಂ. ಸೆನ್ಸಾರ್ ಬೇಕಿಲ್ಲ' ಎಂದು ಅಗ್ನಿ ಶ್ರೀಧರ್ ಚರ್ಚೆಗೆ ಆಹ್ವಾನ ನೀಡುವಂತೆ ಹೇಳಿದ್ದಾರೆ. 'ತಮಸ್ಸು' ಚಿತ್ರಕ್ಕೆ ಪ್ರಮಾಣಪತ್ರ ಪಡೆಯುವ ಸಂದರ್ಭದಲ್ಲಿ ಉಂಟಾದ ಕಹಿ ಅನುಭವವೇ ಸೆನ್ಸಾರ್ ಕುರಿತ ಅವರ ಜಿಜ್ಞಾಸೆಗೆ ಕಾರಣ.

ಪತ್ರಿಕೆಗಳಿಗೆ ಸೆನ್ಸಾರ್ ಇಲ್ಲ. ಟೀವಿಗೆ ಸೆನ್ಸಾರ್ ಇಲ್ಲ. ನೃತ್ಯಕ್ಕೆ, ಸಂಗೀತಕ್ಕೆ ಸೆನ್ಸಾರ್ ಇಲ್ಲ. ಸಾಹಿತ್ಯಕ್ಕೂ ಸೆನ್ಸಾರ್ ಇಲ್ಲ. ಇದಾವುದಕ್ಕೂ ಇಲ್ಲದ ಹದ್ದಿನ ಕಣ್ಣು ಸಿನಿಮಾಗೆ ಯಾಕೆ ಬೇಕು? ಥಿಯೇಟರ್‌ಗಳಲ್ಲಿ ಕದ್ದು ಮುಚ್ಚಿ ಲೈಂಗಿಕ ಚಿತ್ರಗಳ ಪ್ರದರ್ಶನ ನಡೆಯುತ್ತದೆ. 'ಯು ಟ್ಯೂಬ್' ಜನಪ್ರಿಯತೆ ಹೆಚ್ಚುತ್ತಿದೆ. ಗಲ್ಲಿಗಳಲ್ಲೂ 'ಡಿವಿಡಿ'ಗಳು ದೊರೆಯುತ್ತವೆ. ಹೀಗಿರುವಾಗ ಸೆನ್ಸಾರ್ ಮೂಲಕ ನಿಯಂತ್ರಿಸಲು ಹೊರಟಿರುವುದಾದರೂ ಏನನ್ನು ಎನ್ನುವುದು ಶ್ರೀಧರ್ ಪ್ರಶ್ನೆ. ಸೆನ್ಸಾರ್ ಅಗತ್ಯದ ಬಗ್ಗೆ ಚರ್ಚೆಯಾಗಬೇಕು ಎನ್ನೋದು ಅವರಾಸೆ.

ಈಚೆಗೆ ಚನ್ನಪಟ್ಟಣದಿಂದ ಹಿರಿಯ ಹೆಣ್ಣುಮಗಳೊಬ್ಬರು 'ಸುಧಾ'ಕ್ಕೆ ಫೋನ್ ಮಾಡಿದ್ದರು. 'ಶಂಕರ್ ಐಪಿಎಸ್' ಚಿತ್ರದ ವಿಕೃತ ದೃಶ್ಯಗಳ ಬಗ್ಗೆ 'ಚಿತ್ರಸುಧಾ'ದಲ್ಲಿ ಪ್ರಕಟವಾಗಿದ್ದ ಟಿಪ್ಪಣಿ ಅವರಿಗಿಷ್ಟವಾಗಿತ್ತು. ಅವರು ಹೇಳಿದ್ದು: 'ಸಿನಿಮಾ ಅಶ್ಲೀಲವಾಗಿದೆಯೆಂದರೆ ನಾವು ಥಿಯೇಟರ್‌ನಿಂದ ದೂರವಿರಬಹುದು. ಅಂಥ ದೃಶ್ಯಗಳು ಟೀವಿಯಲ್ಲಿ ಬಂದಾಗ ರಿಮೋಟ್ ಇದ್ದೇ ಇದೆ. ಆದರೆ, ರಸ್ತೆಯಲ್ಲಿ ನಡೆಯುವ ಅನಿವಾರ್ಯತೆ ಇದೆಯಲ್ಲ ಸಾರ್? ಅಲ್ಲಿನ ಪೋಸ್ಟರ್‌ಗಳನ್ನು ನೋಡಿದಾಗ ತಲೆ ತಗ್ಗಿಸುವಂತಾಗುತ್ತದೆ. ಕಣ್ಣು ಮುಚ್ಚಿಕೊಂಡು ರಸ್ತೆಯಲ್ಲಿ ನಡೆಯಲಿಕ್ಕಾಗುತ್ತಾ? ಶಾಲೆಯಲ್ಲಿ ಹೋಗುವ ಮಕ್ಕಳು ಆ ಪೋಸ್ಟರ್‌ಗಳನ್ನು ನೋಡುತ್ತಾ ನಿಲ್ಲುವುದನ್ನು ಕಂಡಾಗ ಮನಸ್ಸಿಗೆ ಕಸಿವಿಸಿಯಾಗುತ್ತದೆ' ಎಂದಿದ್ದರು ಅವರು. ಈ ಹೆಣ್ಣುಮಗಳ ಪ್ರಶ್ನೆಗೆ ಏನೆಂದು ಉತ್ತರಿಸುವುದು?

ಮತ್ತೆ ಶ್ರೀಧರ್ ವಿಷಯಕ್ಕೆ ಬರೋಣ. ಮೇಲ್ನೋಟಕ್ಕೆ ಅವರ ತರ್ಕ ಒಪ್ಪುವಂತೆಯೇ ಇದೆ. ಆದರೆ, ಸೆನ್ಸಾರ್ ಅನಿವಾರ್ಯತೆಯ ಹಿಂದೆ ಅನೇಕ ಸೂಕ್ಷ್ಮಗಳಿವೆ. 'ಸಿನಿಮಾಕ್ಕೆ ಮಾತ್ರ ಯಾಕೆ ಸೆನ್ಸಾರ್' ಎನ್ನುವುದು ಅವರ ಪ್ರಶ್ನೆ. ಸಿನಿಮಾ ಒಂದು ಕಲಾಪ್ರಕಾರ ಮಾತ್ರವಾಗಿರದೆ, ಅದೊಂದು ಉದ್ಯಮ ಎನ್ನುವುದನ್ನು ಗಮನಿಸಬೇಕು. ಕೋಟಿ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗುವ ಈ ಮಾಧ್ಯಮ ಉಳಿದೆಲ್ಲ ಪ್ರಕಾರಗಳಿಗಿಂತ ಹೆಚ್ಚು ಪ್ರಭಾವಿ. ಕಲಾಪ್ರಕಾರಗಳು ಸಣ್ಣದೊಂದು ಗುಂಪಿಗೆ, ಅದರಲ್ಲೂ ಸಾಕ್ಷರರು ಹೆಚ್ಚಾಗಿರುವ ಗುಂಪಿನ ಗಮನ ಸೆಳೆದರೆ, ಸಿನಿಮಾ ಎಲ್ಲ ವರ್ಗ–ವಯೋಮಾನದವರನ್ನು ಒಳಗೊಳ್ಳುವ ಮಾಧ್ಯಮ. ಆ ಕಾರಣದಿಂದಲೇ ಸಿನಿಮಾಕ್ಕೆ ಹೆಚ್ಚು ಕಣ್ಗಾವಲು ಬೇಕು.

ಬಾಂಡ್ ಚಿತ್ರದಲ್ಲಿ ಅರೆ ಬೆತ್ತಲೆಯಾಗಿ ಕಾಣಿಸಿಕೊಂಡಿದ್ದ ರಾಜಕುಮಾರ್ ನಂತರ ತಮ್ಮ ವೇಷಕ್ಕೆ ತಾವೇ ನಾಚಿಕೊಂಡಿದ್ದರು. ಅಂಥ ನೈತಿಕ ನಾಚಿಕೆಯನ್ನು, ಸ್ವಯಂ ಸೆನ್ಸಾರ್ ಅನ್ನು ಇವತ್ತಿನ ನಿರ್ಮಾಪಕ, ನಿರ್ದೇಶಕರಿಂದ ನಿರೀಕ್ಷಿಸಲು ಸಾಧ್ಯವೆ? ಸಿನಿಮಾದಿಂದ ಸಾಮಾಜಿಕ ಪರಿಣಾಮ ಸಾಧ್ಯ ಎನ್ನುವ ರಾಜಕುಮಾರ್ ಕಾಲದ ಮಾತನ್ನು ಶ್ರೀಧರ್ ಅವರೂ ಒಪ್ಪುತ್ತಾರೆ. ಒಳ್ಳೆಯ ಪರಿಣಾಮ ಸಾಧ್ಯವಿದ್ದಾಗ, ದುಷ್ಪರಿಣಾಮವೂ ಸಾಧ್ಯವಲ್ಲವೇ? ಆದರೆ, ಇವತ್ತು ಉದ್ಯಮದಲ್ಲಿರುವ ವ್ಯಕ್ತಿಗಳನ್ನು ನೆನಪಿಸಿಕೊಂಡರೆ, ಅಲ್ಲಿ ಸಿನಿಮಾ ಪ್ರೀತಿಗಿಂತಲೂ ವ್ಯಾಪಾರಕ್ಕೇ ಆದ್ಯತೆ ನೀಡುವವರು ಹೆಚ್ಚಾಗಿದ್ದಾರೆ. ವ್ಯಾಪಾರ ಎನ್ನುವುದು ದ್ರೋಹ ಚಿಂತನೆಯಲ್ಲವೇ? ಎಲ್ಲಿ ತಕ್ಕಡಿಯಿರುತ್ತದೋ ಅಲ್ಲಿ ಕತ್ತರಿಯೂ ಇರಬೇಕು.

ಸೆನ್ಸಾರ್ ಬೇಡವೆಂದು ತರ್ಕ ಹೂಡಲಿಕ್ಕೆ ಸಾಕಷ್ಟು ಕಾರಣಗಳಿರುತ್ತವೆ. ಆದರೆ ಸೆನ್ಸಾರ್‌ರಹಿತ ಸ್ಥಿತಿಗೆ ನಮ್ಮ ಸಮಾಜ ಸಿದ್ಧವಾಗಿದೆಯೇ ಎನ್ನುವುದು ಪ್ರಶ್ನೆ. ಅದಾದ ಬಳಿಕ, 'ಸಿನಿಮಾಕ್ಕಿಲ್ಲದ ಕಡಿವಾಣ ಕ್ಯಾಬರೆಗೆ ಬೇಕೆ, ವೇಶ್ಯಾವಾಟಿಕೆಗೆ ಯಾಕೆ?' ಎನ್ನುವ ತರ್ಕವೂ ಉಂಟಾದೀತು.

ಕೆಲವು ದೇಶಗಳಲ್ಲಿ ಸೆನ್ಸಾರ್ ಇಲ್ಲವೆನ್ನುವುದು ನಿಜ. ಆದರೆ ಭಾರತೀಯ ಸಾಮಾಜಿಕ ಪರಿಸ್ಥಿತಿಗೂ ಪಶ್ಚಿಮ ದೇಶಗಳ ಸಮಾಜಕ್ಕೂ ಅಜಗಜ ವ್ಯತ್ಯಾಸವಿದೆ. ಸೆನ್ಸಾರ್ ಕುರಿತು ಶ್ರೀಧರ್ ಪ್ರತಿಪಾದಿಸುವುದು ಒಂದು ಆದರ್ಶವನ್ನು. ಅನಕ್ಷರತೆ, ಕಂದಾಚಾರ, ಜಾತಿ, ಜೀತ– ನಾಗರಿಕ ಪ್ರಪಂಚದ ಕ್ಷೋಭೆಗೆ ಕಾರಣವಾಗುವ ಎಲ್ಲ ಸಂಗತಿಗಳು ಜೀವಂತವಾಗಿರುವ ನಮ್ಮ ಸಮಾಜಕ್ಕೆ 'ಮುಕ್ತ ಮುಕ್ತ' ಎನ್ನುವ ಆದರ್ಶ ಈ ಕ್ಷಣದ ಜರೂರು ಖಂಡಿತಾ ಅಲ್ಲ.

★ ರಚಹ